## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 100/2024

**ಸಾಕ್ಷಿಯನ್ನು ದಿಃ 12.01.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಗಿರೀಶ.ಪಿ | ಸಿಡಬ್ಲ್ಯೂಃ 9 | ಪಿಡಬ್ಲ್ಯೂಃ 6 |
| ತಂದೆಯ ಹೆಸರು | ಪುಟ್ಟಯ್ಯ | | |
| ವಯಸ್ಸು | 49 ವರ್ಷ | | |
| ಕೆಲಸ | ಮುಖ್ಯ ಪೇದೆ, ಹುಣಸೂರು ಪಟ್ಟಣ | | |
| ವಾಸಸ್ಥಳ | ಹುಣಸೂರು. | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು ಕಳೆದ ಮೂರುವರೆ ವರ್ಷಗಳಿಂದ ಹುಣಸೂರು ಪಟ್ಟಣ ಠಾಣೆಯಲ್ಲಿ ಮುಖ್ಯಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 17.12.2023ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 1-00ಗಂಟೆ ಸಮಯಕ್ಕೆ ಚಾಸಾ-1 ರವರು ನನ್ನ ಮುಂದೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಃ 256/2023ರಲ್ಲಿ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರು ನಿಪಿ-2ರಲ್ಲಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ಸಲ್ಲಿಸಿದ ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ದಿಃ 18.12.2023 ರಂದು ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ-1, 5 ಮತ್ತು 6 ರವರಿಗೆ ನೋಟೀಸ್ ನೀಡಿ ಚಾಸಾ-1ರವರು ಹಾಜರಿದ್ದು, ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ-5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 11-45 ರವರೆಗೆ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಸಿ ) ಎಂದು ಗುರುತಿಸಲಾಯಿತು.

ನಾನು ಚಾಸಾ-5 ಮತ್ತು 6 ರವರಿಗೆ ನೋಟೀಸನ್ನು ಈಗ ನೋಡುತ್ತಿದ್ದು, ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಅದೇ ದಿನ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-2 ರಿಂದ 4 ರವರಿಗೆ ನೋಟೀಸ್ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ಸದರಿ ನೋಟೀಸನ್ನು ಈಗ ನೋಡುತ್ತಿದ್ದು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಆರೋಪಿ ಪತ್ತೆಗೆ ಪ್ರಯತ್ನಿಸಿದಾಗ ಆತ ಅವರು ತಲೆಮರಸಿಕೊಂಡಿರುತ್ತಾರೆ.

ದಿಃ 09.01.2024 ರಂದು ಮಹಿಳಾ ಪೇದೆಯ ಮೂಲಕ ಚಾಸಾ-1 ರವರನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು ದ.ಪ್ರ.ಸಂಹಿತೆಯ ಕಲಂ 164ರಡಿಯಲ್ಲಿ ಹೇಳಿಕೆ ದಾಖಲಿಸಲಾಗಿರುತ್ತದೆ. ದಿಃ 05.02.2024 ರಂದು ಚಾಸಾ-1 ರವರ ಗಾಯದಪ್ರಮಾಣ ಪತ್ರವನ್ನು ಹಾಗೂ ಚಾಸಾ-1ರವರು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯನ್ನು ಸ್ವೀಕರಿಸಿರುತ್ತೇನೆ. ಸದರಿ ಗಾಯದ ಪ್ರಮಾಣವನ್ನು ಈಗ ನೋಡುತ್ತಿದ್ದು, ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಹೇಳಿಕೆಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದಿಂದ ಜಾಮೀನು ಪಡೆದು ದಿನಾಂಕಃ 09.01.2024 ರಂದು ಆರೋಪಿತರು ನನ್ನ ಮುಂದೆ ಹಾಜರಾದ ಮೇರೆಗೆ ನೋಟೀಸ್ ಜಾರಿಗೊಳಿಸಿ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ-1 ರವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-1ರ ಮಹಜರಿನಲ್ಲಿ ನಿಪಿ-2ರ ದೂರಿನಲ್ಲಿ, ನಿಪಿ-7ರ ಹೇಳಿಕೆಯಲ್ಲಿ ಚಾಸಾ-1 ರವರ ಸಹಿಗಳನ್ನು ಗುರುತಿಸಿದ್ದು, ನಿಪಿ-1 ಮತ್ತು 2 ರಲ್ಲಿ ಚಾಸಾ-1 ರವರ ಸಹಿಗಳನ್ನು ನಿಪಿ-1(ಸಿ) ಮತ್ತು ನಿಪಿ-2(ಬಿ) ಎಂದು, ನಿಪಿ-7ರಲ್ಲಿ ಚಾಸಾ-1 ರವರ ಸಹಿಗಳನ್ನು ನಿಪಿ-7(ಬಿ) ಯಿಂದ (ಇ) ಎಂದು ಗುರುತಿಸಲಾಯಿತು. ಈ ಹಂತದಲ್ಲಿ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. SP ವಕೀಲರಿಂದಃ**

ಹುಣಸೂರು ಸಾರ್ವಜನಿಕ ಆಸ್ಪತ್ರೆ ಪೋಲೀಸ್ ಠಾಣೆಯ ಎದುರುಭಾಗದಲ್ಲಿ ಇದೆ ಎಂದರೆ ಸರಿ. ಹುಣಸೂರು ಸರ್ಕಾರಿ ಆಸ್ಪತ್ರೆಗೆ ಯಾವುದಾದರೂ ಪ್ರಕರಣದಲ್ಲಿ ಯಾರಾದರೂ ಗಾಯಾಳು ಚಿಕಿತ್ಸೆಗೆ ದಾಖಲಾದರೆ MLC ಮೆಮೋ ಠಾಣೆಗೆ ಕಳುಹಿಸಿಕೊಡುತ್ತಾರೆ ಎಂದರೆ ಸರಿ. ದಿಃ 12.12.2023 ರಂದು ಆಸ್ಪತ್ರೆಯಿಂದ ನಮ್ಮ ಠಾಣೆಗೆ MLC ಮೆಮೋ ಬಂದಿದೆ. ದಿಃ 12.12.2023 ರಂದು ಆಸ್ಪತ್ರೆಗೆ ಭೇಟಿಕೊಟ್ಟು ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ದಿಃ 12.12.2023 ರಂದು ಆಸ್ಪತ್ರೆಗೆ ಭೇಟಿ ನೀಡಿ ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು ಹಾಗೂ ಆರೋಪಿತರನ್ನು ಕರೆಸಿ ಜಂಟಿ ಹೇಳಿಕೆ ಮಾಡಿಕೊಂಡು ಕಳುಹಿಸಿಕೊಡಲಾಗಿದೆ. ಆ ರೀತಿ ಜಂಟಿ ಹೇಳಿಕೆ ಪಡೆದುಕೊಳ್ಳಲಾಗಿದೆ ಎಂಬ ಬಗ್ಗೆ ಈ ದೋಷಾರೋಪಣಾ ಪತ್ರದೊಂದಿಗೆ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ದಿಃ 12.12.2023 ರಂದು ಆಸ್ಪತ್ರೆಗೆ ಭೇಟಿಕೊಟ್ಟು ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಳ್ಳದೇ ಇರುವ ಕಾರಣ ಅದನ್ನು ದೋಷಾರೋಪಣಾ ಪತ್ರದೊಂದಿಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ, ಸದರಿ ಜಂಟಿ ಹೇಳಿಕೆಯನ್ನು ದೋಷಾರೋಪಣಾ ಪತ್ರದೊಂದಿಗೆ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ. ಜಂಟಿ ಹೇಳಿಕೆಯನ್ನು ದಾಖಲಿಸಿಕೊಳ್ಳದೇ ಇದ್ದ ಕಾರಣವೇ ಅದನ್ನು ದೋಷಾರೋಪಣ ಪತ್ರದೊಂದಿಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ದೂರು ದಿಃ 17.12.2023 ರಂದು ದಾಖಲಾಗಿದೆ ಎಂದರೆ ಸರಿ. ದೂರನ್ನು ದಾಖಲಿಸಲು ವಿಳಂಬಕ್ಕೆ ಕಾರಣ ಏನು ಎಂದು ಪ್ರ.ವ.ವರದಿಯಲ್ಲಿ ನಮೂದಿಸಿಲ್ಲ ಎಂದರೆ ದೂರಿನಲ್ಲಿ ಹೇಳಿದ್ದಾರೆ. ನಮ್ಮ ಠಾಣೆಯಿಂದ ಹುಣಸೂರು ನ್ಯಾಯಾಲಯ ಒಂದು ಕಿ.ಮೀ ದೂರದಲ್ಲಿದೆ ಎಂದರೆ ಸರಿ. ಯಾವುದೇ ದೂರನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಡಬೇಕಾದರೆ 10 ರಿಂದ 15 ನಿಮಿಷ ಸಾಕಾಗುತ್ತದೆ ಎಂದರೆ ಸರಿ.

ದೂರು ನೀಡಲು ದಿಃ 17.12.2023 ರಂದು ಚಾಸಾ-1 ಒಬ್ಬರೇ ಬಂದಿದ್ದರು. ಮುಖ್ಯಪೇದೆ 257ರವರ ಮೂಲಕ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ನ್ಯಾಯಾಲಯಕ್ಕೆ ಎಷ್ಟು ಗಂಟೆಗೆ ಪ್ರ.ವ.ವರದಿಯನ್ನು ಸಲ್ಲಿಸಲಾಗಿದೆ ಎಂಬ ಬಗ್ಗೆ ಅವರ

ಹೇಳಿಕೆ ಪಡೆದುಕೊಂಡಿದ್ದಿರಾ ಎಂದರೆ ಇಲ್ಲ. ದಿಃ 17.12.2023 ರಂದು ಮಧ್ಯಾಹ್ನ 1 ಗಂಟೆಗೆ ಚಾಸಾ-1 ರವರು ನನ್ನ ಮುಂದೆ ಹಾಜರಾಗಿ ದೂರು ನೀಡಿಲ್ಲ ಎಂದರೆ ಸರಿಯಲ್ಲ. ದಿಃ 18.12.2023 ರಂದು ಒಂದು ಸುಳ್ಳು ದೂರನ್ನು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1ರ ದೂರಿನ ಪ್ರಕಾರ ಘಟನಾ ಸ್ಥಳ ಹುಣಸೂರು ಪಟ್ಟಣ ಕಲ್ಕುಣಿಕೆಯ KHB ಕಾಲೋನಿ ಎಂದರೆ ಸರಿ. LIG 55 ರ ವಾಸದ ಮನೆಯಲ್ಲಿ ಯಾರು ವಾಸ ಮಾಡುತ್ತಿದ್ದರು ಎಂದರೆ ನಾವು ಹೋದಾಗ ಚಾಸಾ-1 ರವರ ಅತ್ತೆ ಇದ್ದರು. ಚಾಸಾ-1 ರವರ ಅತ್ತೆ ಅದೇ ಮನೆಯ ಖಾಯಂ ವಾಸಿಯಾಗಿದ್ದರು ಎಂದರೆ ಸರಿ. ಈ ಘಟನೆಗೆ ಸಂಬಂಧಿಸಿದಂತೆ ಚಾಸಾ-1 ರವರ ಅತ್ತೆಯ ಹೇಳಿಕೆ ಪಡೆದುಕೊಂಡಿಲ್ಲ. ಘಟನಾ ಸ್ಥಳದ ಆಜು-ಬಾಜುವಿನಲ್ಲಿ ಹಲವಾರು ವಾಸದ ಮನೆಗಳು ಇವೆ ಎಂದರೆ ಸರಿ. ಆಜು-ಬಾಜು ಮನೆಯವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಯಾರ ಹೇಳಿಕೆ ಪಡೆದುಕೊಂಡಿದ್ದಿರಿ ಎಂದರೆ ಚಾಸಾ-2 ಮತ್ತು 3 ರವರ ಹೇಳಿಕೆ ಪಡೆದುಕೊಂಡಿದ್ದೇನೆ. ಚಾಸಾ-2 ರವರು ಚಾಸಾ-1 ರವರ ಚಿಕ್ಕಮ್ಮನ ಮಗಳು ಎಂದು ತನಿಖೆಯಲ್ಲಿ ಕಂಡು ಬಂದಿದೆ ಎಂದರೆ ಸರಿ. ಚಾಸಾ-1 ರವರು ಚಾಸಾ-3 ರವರ ಸ್ವಂತ ಅಕ್ಕನ ಮಗಳು ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿದೆ ಎಂದರೆ ಸರಿ. ಚಾಸಾ-2 ಮತ್ತು 3 ರವರು ಆಜು-ಬಾಜುದಾರರಲ್ಲ, ಬೇರೆ ಕಡೆ ವಾಸವಿದ್ದಾರೆ ಎಂದರೆ ಸರಿಯಲ್ಲ. ತನ್ನ ತನಿಖೆಯಲ್ಲಿ ದಿಃ 12.12.2023 ರಂದು ಯಾವುದೇ ಘಟನೆ ನಡೆದಿಲ್ಲ ಎಂದು ಕಂಡು ಬಂದ ಕಾರಣವೇ ಆಜುಬಾಜುದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ.

ನನ್ನ ತನಿಖೆಯಲ್ಲಿ ಸದರಿ ಮನೆ ಚಾಸಾ-1 ರವರ ಅತ್ತೆಯ ಹೆಸರಿನಲ್ಲಿ ಇತ್ತು ಎಂದು ಕಂಡು ಬಂದಿದೆ. ಚಾಸಾ-1 ರವರ ಅತ್ತೆಗೆ ಇಬ್ಬರು ಗಂಡು ಮಕ್ಕಳು ಇದ್ದರು ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿದೆ ಎಂದರೆ ಸರಿ. ಸದರಿ ಮನೆ ಚಾಸಾ-1 ರವರ ಅತ್ತೆಯ ಸ್ವಂತ ಮನೆ ಎಂದು ಕಂಡು ಬಂದಿದೆ ಎಂದರೆ ಸರಿ. ಸದರಿ ಮನೆಯನ್ನು ಚಾಸಾ-1 ಮತ್ತು ಅವರ ಗಂಡ ತಮ್ಮ ಹೆಸರಿಗೆ ಬರೆಸಿಕೊಳ್ಳಬೇಕು ಎಂದು ಪ್ರಯತ್ನ ಪಟ್ಟಿದ್ದರು ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿದೆ ಎಂದರೆ ಇಲ್ಲ. ಆರೋಪಿತರು ಅದೇ ಮನೆಯಲ್ಲಿ ವಾಸವಿದ್ದರು ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿದೆ ಎಂದರೆ ಸರಿಯಲ್ಲ. ಆರೋಪಿತರಿಬ್ಬರು ಚಾಸಾ-1ರವರ ಅತ್ತೆಯ ಮನೆಯಲ್ಲಿಯೇ ಇದ್ದರು. ಆರೋಪಿತರನ್ನು

ಆ ಮನೆಯಿಂದ ಖಾಲಿ ಮಾಡಿಸಬೇಕು ಎಂದು ಚಾಸಾ–1 ರವರು ಸುಳ್ಳು ದೂರು ನೀಡಿದ್ದಾರೆ ಎಂಬ ಬಗ್ಗೆ ನನ್ನ ತನಿಖೆಯಲ್ಲಿ ಕಂಡು ಬಂದಿದೆ ಎಂದರೆ ಸರಿಯಲ್ಲ.

ಚಾಸಾ–5 ರವರು H.D.ಕೋಟೆ ತಾಲ್ಲೂಕಿನ ಬೀಚನಹಳ್ಳಿ ಗ್ರಾಮ ಮತ್ತು ಚಾಸಾ–6 ರವರು ಅದೇ ತಾಲ್ಲೂಕಿನ ಬೂರೆದೇವರ ಮಂಟಿಕೊಪ್ಪಲು ವಾಸಿಗಳು ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿದೆ ಎಂದರೆ ಸರಿ. ಚಾಸಾ–2 ರಿಂದ 6 ರವರು ಚಾಸಾ–1 ರವರ ಸಂಬಂಧಿಕರು ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ ಸ್ಥಳ ಮಹಜರನ್ನು ಠಾಣೆಯಲ್ಲಿ ಸೃಷ್ಟಿಸಿ ಚಾಸಾ–5 ಮತ್ತು 6 ರವರ ಸಹಿಗಳನ್ನು ಠಾಣೆಯಲ್ಲಿಯೇ ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ.

ಈ ಕೇಸಿಗಾಗಿ ಚಾಸಾ–1 ರವರ ಹೇಳಿಕೆಯನ್ನು ನಿಪಿ–7 ರಂತೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ–2 ರಿಂದ 4 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ, ಅದನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರವನ್ನು ಈ ಕೇಸಿಗಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖೆಯ ಸಮಯದಲ್ಲಿ ಆರೋಪಿತರು ಕೃತ್ಯ ಎಸಗಿರುವ ಬಗ್ಗೆ ಕಂಡು ಬಾರದೇ ಇದ್ದರೂ ಕೂಡ ಅವರಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ತನಿಖೆ ಮಾಡಿ ಸುಳ್ಳು ಅಂತಿಮ ವರದಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.